No provision is made in this Act for revision to Government from the orders passed by the Appellate Tribunal. It all depends on, if I may say so in all sincerity and friendliness to my esteemed friend the Revenue Minister, who constitute the Board; if we know whom to put on the Board of Revenue, we need not be anxious to provide for any revision to Government on the ground that the decision of the Board may be contrary to law or may result in miscarriage of justice. We ought to know in constituting a Board of Revenue, and an authority as important as the Board of Revenue, that such persons should be appointed to the Board of Revenue who, by virtue of their qualifications and other attainments, are incapable of going contrary to law in matters with which they are concerned or of doing things which would result in miscarriage of justice. It would be relevant in this connection to remind ourselves that, while a revision has been provided for to Government from the final appellate orders of this Board of Revenue, nothing prevents an aggrieved person from approaching the High Court, for instance, on the ground that the Revenue Minister or the State Government has exceeded its authority or has acted outside the scope of its legitimate authority as laid down, in exercising its jurisdiction. What would happen is, we would not only add to the difficulties of the Government but we would also be adding to the difficulties of the High Court and also the litigants. We would be tempting the aggrieved parties to seek more relief from diverse Tribunals; that, I think, is certainly not conducive to the efficiency and the working in the Revenue and allied Departments. It would be a truism for me to say that expediency is the essence of the administration in revenue matters, because they fetch money to Government and dilatoriness is not certainly in the interest of the Government. Therefore, I would suggest that either we retain the present arrangements with regard to the final appellate authority being exercised by Government itself or we alter the constitution of the Board so as to invest it with final appellate authority and not be too much concerned about retaining revisional authority in the hands of Government, because, as I said, in Bombay they have found it possible to provide adequate relief. This Act is 15 years old and it does not appear to have been a subject matter of great controversy; and the schedule of this enactment mentions as many as 13 different legislative enactments in respect of which, the authority of Government would be exercised by the Revenue Tribunal. To me it seems that, if we can do something along the lines of what has been done in the neighbouring States, the Bombay Act would furnish the proper basis upon which our own Board should be set up. Even in Madras, as I had been saying a little early, we have the Board of Revenue although a proposition had been mentioned some months ago, before a change of Ministry happened in Madras, for doing away with the Board of Revenue. I think the Board of Revenue will continue to exist and will continue to deal with matters of revenue satisfactorily as it seems to have been doing at least for one and a half century. It would appear little strange to us that a legislative enactment passed in the year 1803 still

governs the constitution and the functions of the Board of Revenue in Madras ; in fact, it is so.

4 P.M.

The Madras Board of Revenue Act was formed as Madras Regulation I of 1803 and it has been a good law. That Regulation provides for the setting up of a Board of Revenue. It is really a large enactment and it is not my intention to take any time in engaging the House by reading out portions of that enactment. All that I wish to point out is that this Board of Revenue was provided for by a statute as long as 150 years ago and it has been continuing to function, and, according to reports, continues to function satisfactorily in the State of Madras. There was another enactment in 1894 conferring additional powers upon the Board of Revenue. And the Board continues to function and it is practically the final appellate authority in all matters pertaining to revenue. There the members of the Board of Revenue are not *ex-officio* members of the Board while holding other substantive appointments or other administrative offices, but function as whole-time members of the Board of Revenue. The First Member of the Board of Revenue or the Second Member or the Third Member would be a whole-time appellate authority not distracted by other administrative duties. Similarly in the Central Government, we have a Central Board of Revenue and whoever may be the members of the Central Board of Revenue it is the Central Board of Revenue that is the final appellate authority in all matters relating to revenues. The Minister for Finance in the Government of India has no appellate or revisional authority over the Central Board of Revenue. Therefore I would suggest that, if the intention is to divest the Minister in charge of the portfolio of the work,—I will not say trouble but I will say work,—of having to hear and dispose of appeals in revenue matters, the most desirable thing would be to set up a statutory Board, appoint proper persons to be the members of the Board and invest them with powers of final appellate authority. That is the best thing. But if there is any desire to retain the final authority in the Government, let them continue the existing practice. Our people are accustomed to it and I hope I shall not be misunderstood if say that our Ministers are accustomed to it and therefore let the existing practice continue. If there is any little improvement that can be made in the procedure or if there is anything that can be done to minimise the number of appeals that Government may hear, those improvements may be made.

Then, Sir, I find that Government have taken advantage of this opportunity to add just a little more of their revenues by enhancing the court fees payable on appeals before the Board. At present the court fees payable on revenue appeal before the Revenue Commissioner, to the best of my recollection, is Rs. 1-8-0 or Rs. 2. To enhance the court fees payable from Rs. 2 to Rs. 5 is not reasonable and I do not consider it just, merely because an appeal is to be heard by more than one person. And the levy of court fee of Rs. 3 on revision petition to Government is also not reasonable. After all the additional revenue that this enhanced levy might fetch may not amount to even a lakh of rupees. I do not expect the enhanced revenue would amount to even Rs. 50,000. But this enhanced levy will be remembered by the people to our disadvantage collectively as well as individually as representatives of the people. And apart from being remembered, they will certainly dwell upon it as a matter of great inconvenience and expenditure and show who are really the persons who will be knocking in appeal or revision before one or the other of these authorities.

Sir, it must be within the experience of my friend the Revenue Minister that hundreds and hundreds of petitions, upon which in the ordinary courts of law court fees of at least Rs. 2 would be payable, are presented free of court fee when the Hon'ble Minister goes on tour or happens to be

(SRI M. V. RAMA RAO.)

invited for a function at a place away from here. Large numbers of those petitions are received with sympathy and are looked into at leisure and I dare say relief is given in deserving cases without levying court fee. When no necessity is felt about the amount of court fee payable upon these appeals and revision petitions, let us not make the enhanced levy of court fee on these appeal petitions and revision petitions.

These are the important matters which I wish the Select Committee, to which this Bill is likely to be referred, would examine carefully, unless the Hon'ble Minister has any other intention with respect to this Bill. I hope that no considerations of Governmental prestige will stand in the way of our making such provisions in the Bill as will make it really effective for the purpose the Government have in their view.

ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಈ ಮಸೂದೆಯನ್ನು ಸರ್ಕಾರದವರು ಬಹಳ ದೊಡ್ಡ ಉದ್ದೇಶದಿಂದ ಈ ಸಭೆಯ ಮುಂದೆ ಇಟ್ಟಿರುತ್ತಾರೆ. ಈಗ ತಂದಿರತಕ್ಕ ತಿದ್ದುಪಡಿ ಮಸೂದೆಯಿಂದ ಈ ಉದ್ದೇಶ ಸಫಲವಾಗುತ್ತದೆಯೇ, ಅಥವಾ ಇಲ್ಲವೇ ಎಂಬುದನ್ನು ಪರಿಶೀಲನುವುದು ಈ ಸಭೆಯ ಕರ್ತವ್ಯ. ಒಂದು ವೇಳೆ ಸಫಲವಾಗದೆ ಇದ್ದರೆ ಇದನ್ನು ಯಾವ ರೀತಿ ಮಾರ್ಪಾಡು ಮಾಡ ಬೇಕೆಂಬುದನ್ನು ಪರಿಶೀಲಿಸಬೇಕು. ಈಗಿರತಕ್ಕ ರೀತಿ ಯಲ್ಲಿಯೇ ಈ ಮಸೂದೆಯನ್ನು ಅಂಗೀಕರಿಸುವುದು ಒಳ್ಳೆಯದೇ ಎಂಬುದನ್ನೂ ಸಹ ನಾವು ಯೋಚಿಸ ಬೇಕಾಗಿದೆ. ಈ ಮಸೂದೆಯ ಮೇಲೆ ಹಿಂದೆ ಮಾತ ನಾಡಿದ ಸದಸ್ಯರು ಅನೇಕ ಲೋಪದೋಷಗಳನ್ನು ತೋರಿಸಿರುತ್ತಾರೆ. ಈ ಮಸೂದೆಯನ್ನು ಜಾರಿಗೆ ತರುವುದಕ್ಕಿಂತ, ಹಾಲಿ ಇರತಕ್ಕ ವ್ಯವಸ್ಥೆಯೇ ಉತ್ತಮವಾಗಿದೆ ಎಂಬ ಭಾವನೆ ಬರುವಂತೆ ಅವರು ಮಾತನಾಡಿದರು. ಈ ಮಸೂದೆಯಲ್ಲಿರುವ ಲೋಪ ದೋಷಗಳೇನು ಎಂಬುದನ್ನು ಶ್ರೀ ಪಟ್ಟಾಭಿರಾಮ್ ರವರು ಮತ್ತು ಶ್ರೀ ರಾಮರಾಯರು ವಿಶದವಾಗಿ ತಿಳಿಸಿರುತ್ತಾರೆ. ಈಗಿರತಕ್ಕ ವ್ಯವಸ್ಥೆಯ ಪ್ರಕಾರ ಜಿಲ್ಲಾಧಿಕಾರಿಗಳ ಆರ್ಡರಿನ ಮೇಲೆ ಅಪೆಲೆಟ್ ಅಥಾರಿಟಿ ರೆವೆನ್ಯೂ ಕಮಿಷನರ್ ಅವರು, ಅನಂತರ ಸರ್ಕಾರ ಎಂದು ನಿರ್ಧರಿಸಲ್ಪಟ್ಟಿದೆ. ಈಗ ತಂದಿರುವ ಮಸೂದೆಯ ಉದ್ದೇಶವಾದರೂ ಜನರಿಗೆ ಇನ್ನೂ ಹೆಚ್ಚಿನ ಅನುಕೂಲವನ್ನು ಕಡಮೆ ಖರ್ಚಿನಲ್ಲಿ ದೊರಕಿಸಿ ಕೊಡಬೇಕೆಂಬುದೇ ಆಗಿದೆ. ಆ ಉದ್ದೇಶ ಸಾಧನೆಯು ಈ ಮಸೂದೆಯಿಂದ ಆಗುತ್ತದೆಯೇ ಎಂಬುದನ್ನು ತಾವು ಯೋಚಿಸಬೇಕಾಗಿದೆ. ಈಗ ಒಂದು ರೆವಿನ್ಯೂ ಬೋರ್ಡ್ constitute ಮಾಡಬೇಕೆಂದೂ, ಅದರ ಸದಸ್ಯರು ರೆವೆನ್ಯೂ ಕಮಿಷನರು, ಎಕ್ಸೈಜ್ ಕಮಿಷನರು, ಲೋಕಲ್ ಸೆಲ್ಫ್ ಗೌವರ್ನ್‌ಮೆಂಟ್ ಕಮಿಷನರು ಮತ್ತು ಸರ್ಕಾರಕ್ಕೆ ಉಚಿತವೆಂದು ತೋರಿಬರುವ ಇನ್ನಾರಾದರೂ ಇರಬಹುದೆಂದೂ ಹೇಳಿದೆ. ಈ ಬೋರ್ಡಿನ ಸದಸ್ಯತ್ವದ ಸಂಖ್ಯೆ ಸಾಮಾನ್ಯವಾಗಿ ಮೂರು ಇರುವುದೆಂದು ಹೇಳಿದೆ. ಅದು ಆರು ಆಗುತ್ತದೆಯೋ ಅಥವಾ ಹನ್ನೆರಡು ಆಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಇಷ್ಟೇ ಸಂಖ್ಯೆ ಇರಬೇಕೆಂದು ನಿರ್ದಿಷ್ಟವಾಗಿಲ್ಲ; ಮತ್ತು appellate jurisdiction ಸರ್ಕಾರದವರೇ ಇಟ್ಟು ಕೊಂಡಿರಬೇಕೇ ಅಥವಾ ಈ ಬೋರ್ಡಿಗೇ ಇರಬೇಕೇ ಎಂಬುದು ಸಹ ಜಿಜ್ಞಾಸೆಯ ವಿಚಾರ. ಏಕೆಂದರೆ, ರೆವೆನ್ಯೂ ಕಮಿಷನರು original jurisdictionನಲ್ಲಿ ಒಂದು ಆರ್ಡರ್ ಮಾಡಿದ ಮೇಲೆ, ಪುನಃ appellate jurisdictionನಲ್ಲಿ ಅವರೇ ಅಧಿಕಾರ ಹೊಂದಿ ಬೇರೊಂದು ರೀತಿ ಆರ್ಡರ್ ಮಾಡುವುದು ಸಾಧುವೇ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಹಾಗೆ ಮಾಡುವುದು ಅಸ್ವಾಭಾವಿಕವಾದುದು. ಅಷ್ಟೇ ಅಲ್ಲದೆ ತಮ್ಮ ಮೊದಲನೆಯ ಆರ್ಡರಿಗೇ ಇತರ ಸಹೋದ್ಯೋಗಿಗಳನ್ನೂ ಒಲಿಸಿಕೊಳ್ಳುವ ಪ್ರಯತ್ನ ನಡೆಯುವುದು ಅಸ್ವಾಭಾವಿಕವಲ್ಲ. ಹೀಗಿರುವಲ್ಲಿ ಜನರಿಗೆ ಇದರಿಂದ ಯಾವ ರೀತಿ ನ್ಯಾಯ ದೊರಕುತ್ತದೆ ಎಂಬುದನ್ನು ನಾವು ಯೋಚಿಸಬೇಕಾಗಿದೆ.

Sri Kadidal MANJAPPA.—It is provided in clause 5 of the Bill—Exercise of powers of the Board.

> "Provided further that no appeal or revision petition against any original order referred to in sub-section (2) of section 4 shall be heard by the member who passed the original order."

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥ ಸಂದರ್ಭದಲ್ಲಿ ಅವರನ್ನು ಎಕ್ಸ್‌ಕ್ಲೂಡ್ ಮಾಡುವ ಏರ್ಪಾಡೂ ಸಹ ಇದೆ ಎಂಬುದನ್ನು ನಾನು ಬಲ್ಲೆ. ಆದಾಗ್ಯೂ ಕೂಡ ಒಬ್ಬರು ಒಂದು ಸಭೆಯ ಸದಸ್ಯರಾಗಿರುವಾಗ ಅವರು ಹಿಂದೆ ಮಾಡಿದ ಒಂದು ಆರ್ಡರಿನ ಮೇಲೆ ವಿರೋಧವಾಗಿ ಆರ್ಡರ್ ಮಾಡಬೇಕಾಗಿ ಬಂದರೆ ಸಭೆಯ ಇತರ ಸದಸ್ಯರಲ್ಲಿ ಯಾವ ಮನೋಭಾವ ವುಂಟಾಗುತ್ತದೆ ಎಂಬುದನ್ನು ಯೋಚನೆ ಮಾಡಿ. ಮನುಷ್ಯ ಸ್ವಭಾವ ಯಾವ ರೀತಿ ಇದೆ ಎಂಬುದನ್ನು ನೋಡಿಕೊಂಡು ಕಾನೂನು ಮಾಡಬೇಕು. ಮನುಷ್ಯರು ಮೆಕ್ಯಾನಿಕಲ್ ಮೆಷೀನುಗಳಲ್ಲ. ಸಾಮಾನ್ಯವಾಗಿ ಮನುಷ್ಯರಿಗೆ ಸ್ವಾಭಾವಿಕವಾಗಿರತಕ್ಕ ಈ ಭಾವನೆಗಳಿಗೆಲ್ಲಾ ಸದಸ್ಯರೂ ಒಳಪಟ್ಟಿರುತ್ತಾರೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಈ ಬೋರ್ಡು ಹೇಗೆ ರಚನೆಯಾಗಬೇಕೆಂದರೆ ಕೆಳಗಿನ ಅಧಿಕಾರಿಗಳು ಮಾಡಿರತಕ್ಕ ತೀರ್ಮಾನದ ಮೇಲೆ ಅಪೆಲೆಟ್ ಜ್ಯೂರಿಸ್‌ಡಿಕ್ಷನ್ ಎಕ್ಸರ್‌ಸೈಜ್ ಮಾಡುವವರು ನಿರ್ದಾಕ್ಷಿಣ್ಯ ಮನೋಭಾವದಿಂದ ನೋಡತಕ್ಕವರಿರಬೇಕು. ಈ ಬೋರ್ಡಿನಲ್ಲಿ ಸದಸ್ಯರಾಗಿರಬೇಕೆಂದು ಈ ಮಸೂದೆಯಲ್ಲಿ ಹೇಳಿರುವ ಅಧಿಕಾರಿಗಳಿಗೆಲ್ಲ ದಿನಕ್ಕೆ 15 ಘಂಟೆ ಕೆಲಸಮಾಡಿದರೂ ಸಾಲದಷ್ಟು ಕೆಲಸವಿರುತ್ತದೆ. ಅವರುಗಳಿಗೆ ಈ ಬೋರ್ಡ್ ಆಫ್ ರೆವಿನ್ಯೂ ಕೆಲಸಕಾರ್ಯಗಳನ್ನೂ ಹಚ್ಚಿಸಿಬಿಟ್ಟರೆ ಮಾಟಿಂಗಿನ ದಿವಸವನ್ನು ಗೊತ್ತುಮಾಡಿಕೊಳ್ಳುವುದೇ ಕಷ್ಟವಾಗುತ್ತದೆ. ಒಂದುವೇಳೆ ಗೊತ್ತುಮಾಡಿ ಕೊಂಡರೂ ಆ ದಿವಸ ಏನೇನು ಅಡ್ಡಿ ಆತಂಕಗಳು ಬರುತ್ತವೆಯೋ ಹೇಳುವುದಕ್ಕಾಗುವುದಿಲ್ಲ. ಆಗ್ಗೆ

ಮಾಟಿಂಗು ಸೇರುವುದೇ ಕಷ್ಟವಾಗುತ್ತದೆ. ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲ. ಇದರ ಮೇಲೆ ಬೋರ್ಡಿನವರು ಮಾಡುವ ತೀರ್ಮಾನವೇ ಕೊನೆಯದೆಂದು ಮಾಡಿದ್ದರೆ ಚೆನ್ನಾಗಿತ್ತು. ಹಾಗಿಲ್ಲದೆ ಅವರ ತೀರ್ಮಾನದಮೇಲೆ ಸರ್ಕಾರಕ್ಕೆ ಅಪೀಲು ಇರುತ್ತದೆ. Miscarriage of justice ಆದ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸರ್ಕಾರಕ್ಕೆ ಅಪೆಲೇಟ್ ಜ್ಯೂರಿಸ್‌ಡಿಕ್ಷನ್ ಇರುತ್ತದೆ. ಆ ಅಧಿಕಾರ ಸರ್ಕಾರಕ್ಕೆ ಇದೆ ಎಂದಮೇಲೆ ಬೋರ್ಡ್ ಆಫ್ ರೆವಿನ್ಯೂ ಮಾಡಿದ ಆರ್ಡರ್‌ಮೇಲೆ ಯಾರೂ ಸುಮ್ಮನೆ ಕೂರುವುದಿಲ್ಲ. ಅಪೀಲು ಮಾಡಿಯೇ ಮಾಡುತ್ತಾರೆ. ಶ್ರೀ ಮರಿಯಪ್ಪನವರು ಹೇಳಿದಪ್ರಕಾರ ಈ ಬೋರ್ಡ್ ಆಫ್ ರೆವಿನ್ಯೂ ಸಂಸ್ಥೆಯ ಗಾಡಿಯ ಏದನೆ ಚಕ್ರವಾಗಿ ಪರಿಣಮಿಸಿ ಒಂದುತಿಂಗಳನಲ್ಲಿ ಆಗುತ್ತಾ ಇದ್ದ ಕೆಲಸಕ್ಕೆ ಮೂರು ತಿಂಗಳು ಬೇಕಾಗುತ್ತದೆ. In a way a fifth wheel is attached to the coach; where to attach it and how to attach it, it is for the Hon'ble Minister Sri Kadidal Manjappa to say. Miscarriage of justice ಎಂಬುದಕ್ಕೆ ಬಹಳ ವಿಶಾಲವಾದ ಅರ್ಥ ಕೊಡಲು ಸಾಧ್ಯವಿದೆ. ಅಲ್ಲದೆ ಶಾಸನಕ್ಕೆ ವಿರೋಧವಾಗಿ ಏನಾದರೂ ಕಾರ್ಯಕ್ರಮ ನಡೆದರೆ ರೂಲ್ 26-27ರ ಪ್ರಕಾರ ಅಪೀಲು ಇರುತ್ತದೆ. ಅದೇ ರೀತಿ miscarriage of justice ಗೂ ಸಹ ಅಪೀಲಿದೆ ಇವೆರಡು ಪದಗಳನ್ನೂ ಯಾವುದಕ್ಕೆ ಬೇಕಾದರೂ ಅಳವಡಿಸಬಹುದು. ಆದ್ದರಿಂದ ಈಗ ತಾವು ವಾಸ್ತವವಾಗಿ ಜನಗಳಿಗೆ ಅನುಕೂಲ ಕಲ್ಪನೆ ಮಾಡಬೇಕಾದರೆ ವ್ಯವಹಾರ ಮಾರ್ಗವನ್ನೂ ಸುಲಭವಾಗಿ ಮಾಡಬೇಕು. ಈ ಬೋರ್ಡ್‌ನಲ್ಲಿ ಯಾರು ಇರಬೇಕು ಎಂದರೆ—ಇತರ ಕೆಲಸಕಾರ್ಯಗಳ ಜೊತೆಗೆ ಈ ಕೆಲಸವನ್ನು ಮಾಡತಕ್ಕವರು ಇರಬಾರದು. ಶ್ರೀ ಎಂ. ವಿ. ರಾಮರಾಯರು ಹೇಳಿದ ಹಾಗೆ, ಇಲಾಖಾ ಮೊಬ್ಬೀಸರರುಗಳಿಗಿಂತ ಉನ್ನತ ದರ್ಜೆಯ ಒಬ್ಬ ಸದಸ್ಯರು ಇದ್ದರೆ ಈಗ ಸದ್ಯಕ್ಕೆ ಸಾಕು. One man ಬೋರ್ಡನ್ನು ರಚನೆಮಾಡಿ ಈಗ ಸರ್ಕಾರ ಯಾವ ಅಧಿಕಾರವನ್ನು ಚಲಾಯಿಸುತ್ತಾ ಇದೆಯೋ ಆ ಅಧಿಕಾರವನ್ನು ಈ ಬೋರ್ಡಿಗೆ ಕೊಟ್ಟರೆ ಉತ್ತಮ. ಆಗ್ಯೆ ಜನಗಳಿಗೆ ಅನುಕೂಲ ಮತ್ತು ನ್ಯಾಯ ದೊರೆಯುತ್ತದೆ. ಕೆಲವು ವಿಶೇಷ ಸಂದರ್ಭಗಳಲ್ಲಿ point of law ಮೇಲೆ ಅವಶ್ಯಕಬಿದ್ದರೆ ರಿವಿಷ್ಡ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಬಹುದು. ಈಗಿನ ಪ್ರಜಾಪ್ರಭುತ್ವದಲ್ಲಿ mass contact ಇಟ್ಟುಕೊಳ್ಳಬೇಕೆಂಬ ಅಭಿಲಾಷೆ ತಮಗಿದ್ದರೆ ಪೂರ್ಣ ಅಧಿಕಾರ ತಮ್ಮಲ್ಲಿರಬೇಕು. (ನಗು!) ಉದ್ದೇಶ ಸಫಲವಾಗಬೇಕು, ಬಹಳ ಬೇಗ ಜನಗಳಿಗೆ ಅನುಕೂಲ ದೊರೆಯಬೇಕು, ಈಗಿರತಕ್ಕ ಕಿರುಕುಳ ಹೋಗಬೇಕು ಎನ್ನುವುದಿದ್ದರೆ ಮನೂಡೆಯಲ್ಲಿ ಸೂಚಿಸಿರುವ ರೀತಿಯ ಬೋರ್ಡಿಗೆ ಈ ಕೆಲಸಕಾರ್ಯಗಳನ್ನು ಹೊರಿಸುವುದು ಸರಿಯಲ್ಲ. ಈಗ ಹಾಲಿ ಇರತಕ್ಕ ರೀತಿನೀತಿಯೇ ಸಮರ್ಪಕವಾಗಿದೆ ಎನ್ನುವುದು ನಿಮ್ಮ ಅಭಿಪ್ರಾಯವಾದರೆ ಅದನ್ನು ಇನ್ನೂ ಕೆಲವು ದಿವಸ ಅನುಸರಿಸಿಕೊಂಡು ಹೋಗಿ. ಅಡ್ಡಿ ಆತಂಕಗಳು ಪ್ರಬಲವಾಗಿದ್ದರೆ ಈ ಬೋರ್ಡ್ ಆಫ್ ರೆವಿನ್ಯೂ ಯಾವರೀತಿ ಸ್ಥಾಪನೆಮಾಡಬೇಕು ಎಂಬುದನ್ನು ತೀವ್ರವಾಗಿ ಯೋಚನೆ ಮಾಡೋಣ. ಚುನಾವಣೆಯಲ್ಲಿ ಚುನಾಯಿತರಾಗಿ ಬಂದಿರತಕ್ಕವರು, ನ್ಯಾಯಾಸ್ಥಾನದಲ್ಲಿ ಕುಳಿತು ಕೊಳ್ಳುವುದು ತತ್ವಶಃ ಸರಿಯಲ್ಲ, ಬೇರೆಯವರಿಗೆ ಈ ಅಧಿಕಾರವನ್ನು ವಹಿಸಬೇಕೆಂಬ ಅಭಿಪ್ರಾಯ ತಮಗಿದ್ದಪಕ್ಷದಲ್ಲಿ ಈಗ ಸರ್ಕಾರದವರು ಮಾಡುತ್ತಾ ಇರುವ ಕೆಲಸಕಾರ್ಯಗಳನ್ನು ಈಗ ಸದ್ಯಕ್ಕೆ ಒಬ್ಬರು ಸದಸ್ಯರು ಇರತಕ್ಕ ಬೋರ್ಡ್ ಆಫ್ ರೆವಿನ್ಯೂ ರಚನೆಮಾಡಿ. ಇದಕ್ಕೆ ಹೆಚ್ಚು ದುಡ್ಡು ಖರ್ಚಾಗುವುದಿಲ್ಲ. ಈಗ ಸದ್ಯಕ್ಕೆ Board of Revenue with one man ಸಾಕು. ಆಮೇಲೆ ಬೇಕಾದರೆ ಸಂಖ್ಯೆಯನ್ನು ಮೂರಕ್ಕೆ ಹೆಚ್ಚಿಸಬಹುದು. ಈಗ ಸದ್ಯಕ್ಕೆ ಒಬ್ಬರನ್ನು ನೇಮಕಮಾಡಿ ಕೆಲಸಕಾರ್ಯಗಳು ಹೇಗೆ ನಡೆಯುತ್ತವೆ ಎಂಬುದನ್ನು ನೋಡಿ; ಅದರ ಅನುಭವದಮೇಲೆ ಕೆಲಸ ಕಾರ್ಯಗಳು ಇನ್ನು ಹೆಚ್ಚಾಗಿದ್ದರೆ ಹೆಚ್ಚು ಸದಸ್ಯರನ್ನು ಸೇರಿಸಬಹುದು. ಈಗ್ಯೆ ಇದನ್ನು ಮಾಡೋಣ. ಬೋರ್ಡು ಮಾಡಿದ ತೀರ್ಮಾನದಮೇಲೆ ವಿಶೇಷ ಕಾರಣಗಳಿಗಾಗಿ ಸರ್ಕಾರ ರಿವಿಷ್ಡ ಅಧಿಕಾರ ಇಟ್ಟುಕೊಳ್ಳಬಹುದು. ಇಲ್ಲದೇ ಇದ್ದರೆ ಅವರ ಆರ್ಡರೇ ಫೈನಲ್ ಎಂದು ಮಾಡಿ. ಅದರಮೇಲೆ miscarriage of justice ಮುಂತಾದವು ನಡೆದರೆ ಹೈಕೋರ್ಟ್ ಇದ್ದೇ ಇದೆ. ಈ ಸಲಹೆಗಳನ್ನು ಅಂಗೀಕಾರಮಾಡಿ ತಾವು ಈ ಬಿಲ್ಲನ್ನು ತಂದರೆ ಆಗ ಈ ಬೋರ್ಡನ್ನು ಸ್ಥಾಪನೆ ಮಾಡಲು ಒಪ್ಪಬಹುದು. ಅನೇಕ ಮಾನ್ಯ ಸದಸ್ಯರು ಈ ರೀತಿಯ ಅಭಿಪ್ರಾಯವನ್ನೇ ಕೊಟ್ಟಿದ್ದಾರೆ. ಸಾರ್ವಜನಿಕಾಭಿಪ್ರಾಯ ತಿಳಿದುಕೊಳ್ಳುವುದಕ್ಕಾಗಿ ಇದನ್ನು ಗೆಜೆಟ್‌ನಲ್ಲಿ ಪ್ರಾಮುಖ್ಯಮಾಡಿ. ಕೆಲವು ಕಾಲ ನೋಡೋಣ. ಮುಂದಿನ ಅಧಿವೇಶನದಲ್ಲಿ ಇದನ್ನು ತಂದರೆ ಆಗ್ಯೆ ಪ್ರತಿನಿಧಿಗಳು ಈ ವಿಷಯದಲ್ಲಿ ಇನ್ನೂ ಸ್ವಲ್ಪ ಪರ್ಯಾಲೋಚನೆಮಾಡುವುದಕ್ಕೆ ಅವಕಾಶ ಸಿಕ್ಕುತ್ತದೆ. ಹಾಗಲ್ಲದೆ ಈಗಲೇ ಮಾಡಬೇಕೆಂಬ ಮನಸ್ಸು ಇದ್ದರೆ ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಿ ಮಾನ್ಯ ಸದಸ್ಯರು ಏನು ಅಭಿಪ್ರಾಯ ಕೊಟ್ಟಿದ್ದರೋ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ತ ರೀತಿಯಲ್ಲಿ ಮಾರ್ಪಾಡುಮಾಡಿ. ಆಮೇಲೆ ಪರಿಶೀಲನೆಮಾಡೋಣ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಮಸಿಯಪ್ಪ (ಹಿರಿಯೂರು).—ಸ್ವಾಮಿ, ಮೈಸೂರು ಬೋರ್ಡ್ ಆಫ್ ರೆವಿನ್ಯೂ ಬಿಲ್ಲು ಕೇವಲ 14 ಕ್ಲಾಸುಗಳು ಮತ್ತು ಒಂದು ಸಣ್ಣ ಷೆಡ್ಯೂಲು ಇರತಕ್ಕ ಒಂದು ಚಿಕ್ಕ ಬಿಲ್ಲು. ಈ ಬಿಲ್ಲಿನ ಮೇಲೂ ಕೂಡ ಮಾನ್ಯ ಸದಸ್ಯರನೇಕರು ಬಹಳ ಕಾಲ ಚರ್ಚೆ ನಡೆಸಿ ಬಹಳ ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಬಹುಶಃ ಇದರ ಮೇರೆ ಹೆಚ್ಚಿನ ಭಾಷಣ ಮಾಡಬೇಕಾದದ್ದು ಅಷ್ಟಾಗಿ ಕಾಣದೇ ಇದ್ದರೂ ಕೂಡ ಒಂದೆರಡು ಅಂಶಗಳು ನನ್ನ ಗಮನಕ್ಕೆ ಬಂದವನ್ನು, ಅನಿವಾರ್ಯವಾಗಿ, ತಿಳಿಸಬೇಕೆಂದು ತಿಳಿದುಕೊಂಡಿದ್ದೇನೆ. ಈ ಮಸೂದಾ ಕಾನೂನಿನಲ್ಲಿ ಅಡಕವಾಗಿರತಕ್ಕ ಉದ್ದೇಶ ಬಹಳ ಘನವಾದದ್ದು, ಬಹಳ ಮುಖ್ಯವಾದದ್ದು ಮತ್ತು ಇದರಿಂದ ದೇಶದಲ್ಲಿ ಕಕ್ಷಿಗಾರರಿಗೆ ಹೆಚ್ಚಿನ ಸೌಲಭ್ಯಗಳು ಎಂದರೆ ಜಾಗ್ರತೆ ನ್ಯಾಯವನ್ನು ದೊರಕಿಸಿಕೊಳ್ಳುವುದರ ಮೂಲಕ ಅಥವಾ ಹೆಚ್ಚುಕಾಲ ವಿಳಂಬವಾಗಿ ಹೆಚ್ಚು ಖರ್ಚು ಪೆಚ್ಚಪಾಗುವುದನ್ನು ತಪ್ಪಿಸಬೇಕೆಂಬ ಒಂದು ದೊಡ್ಡ ಉದ್ದೇಶ ಬಹಳ ಒಳ್ಳೆಯದು. ಆದರೆ ಇದು ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳುವುದಾದರೆ, ಇಲ್ಲಿಯವರೆಗೂ ಕಕ್ಷಿಗಾರರಿಗೆ ನ್ಯಾಯವನ್ನು ಒದಗಿಸತಕ್ಕ ಸೌಲಭ್ಯಗಳು ಎಂದರೆ ತಾಲ್ಲೂಕು ಅಮಲ್ದಾರರು, ಸಬ್ ಡಿವಿಜ಼ನ್ ಆಫೀಸರು, ಡೆಪ್ಯುಟಿ ಕಮಿಷನರು, ರೆವಿನ್ಯೂ ಕಮಿಷನರು ಮತ್ತು ಸರ್ಕಾರ, ಹೀಗೆ ನಾನಾ ವರ್ಗಗಳಲ್ಲಿ ನ್ಯಾಯ

(ಶ್ರೀ ವಿ. ಮಸಿಯಪ್ಪ.)

ದೊರಕಿಸುತ್ತಾ ಇದ್ದಾರೆ. ಈಗ ಈ ಮನೂದಾ ಕಾನೂನನ್ನು ತಂದಿರುವುದರಲ್ಲಿ ನಾವು ಈಗ ಹಾಲ ಇರತಕ್ಕ ಸೌಲಭ್ಯಗಳು ಯಾವುದನ್ನೂ ಕಡಮೆ ಮಾಡದೆ ಈ ಸೌಲಭ್ಯಗಳನ್ನೆಲ್ಲಾ ಉಳಿಸಿಕೊಟ್ಟು ಕಕ್ಷಿಗಾರರಿಗೆ ಜಾಗ್ರತೆ ನ್ಯಾಯ ಒದಗಿಸುವ ಮಾರ್ಗವನ್ನು ಏರ್ಪಾಡುಮಾಡುತ್ತೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಸರ್ಕಾರದವರು ಡೀಲ್ ಮಾಡತಕ್ಕ ರಿವಿಷ್ಟ್, ಅಪೆಲೆಟ್ ಜ್ಯೂರಿಸ್‌ಡಿಕ್ಷನ್ ಈ ಕೆಲಸಗಳಿಗಾಗಿ ಬೇರೆ ಯಾವುದಾದರೂ ಒಂದು ಬೋರ್ಡನ್ನು ರಚನೆ ಮಾಡಿ ಆ ಮೂಲಕ ಬೇಗ ನ್ಯಾಯ ದೊರಕಿಸುವಂತೆ ಮಾಡುತ್ತಾರೆ ಎಂದು ಭಾವಿಸಿಕೊಂಡಿದ್ದೆವು. ಆದರೆ ಈಗ ಬಂದಿರತಕ್ಕ ಮನೂದಾ ಕಾನೂನಿನಲ್ಲಿ ನಮಗೆ ಕಾಣುವುದು ಈಗ ಇರತಕ್ಕ ಸರ್ಕಾರದ ಅಧಿಕಾರವನ್ನು ಸರ್ಕಾರಿ ಅಧಿಕಾರಿಗಳಿಗೆ ಎಂದರೆ ಡಿಪಾರ್ಟ್‌ಮೆಂಟಲ್ ಹೆಡ್ಸ್, ಎಂದರೆ, ರೆವಿನ್ಯೂ ಕಮೀಷನರು, ಎಕ್ಸೈಜ್ ಕಮೀಷನರು, ಎಲ್.ಎಸ್.ಜಿ. ಕಮೀಷನರು ಇರುವಂಥ ಒಂದು ಬೋರ್ಡನ್ನು ರಚನೆಮಾಡಿ ಅವರಿಗೆ ವರ್ಗಾವಣೆಮಾಡಿ ಅವರು ನ್ಯಾಯ ಕೊಡುವ ಹಾಗೆ ಮಾಡಬೇಕೆಂದು ಮಾಡಿರತಕ್ಕದ್ದು ಕಕ್ಷಿಗಾರರಿಗೆ ಹಾಲ ಇರತಕ್ಕ ಸೌಲಭ್ಯದಲ್ಲಿ ಒಂದನ್ನು ಕಳೆದ ಹಾಗಾಯಿತು, ಎಂದರೆ ಸರ್ಕಾರದವರನ್ನು ಅಪ್ರೋಚ್‌ಮಾಡಿ ನ್ಯಾಯ ದೊರಕಿಸಿಕೊಳ್ಳುವಂಥ ಒಂದು ಸ್ಟೇಜ್ ಕಡಮೆಯಾಯಿತು. ಇದರ ಜೊತೆಗೆ ನ್ಯಾಯ ಜಾಗ್ರತೆ ಒದಗಿಸಲಕ್ಕೆ ಸಹಾಯವಾಗುವುದಿಲ್ಲ ಎಂದು ನನಗಾದರೂ ಅನ್ನಿಸುತ್ತದೆ. ಎಷ್ಟು ಸೌಲಭ್ಯ ನಾವು ನಿರೀಕ್ಷಣೆ ಮಾಡುತ್ತಾ ಇದ್ದೆವೋ ಅದು ಆಗುವುದಿಲ್ಲ. ಅದಕ್ಕೆ ಕಾರಣ ಏನೆಂಬುದನ್ನು ಈಗಾಗಲೇ ಅನೇಕರು ತಿಳಿಸಿದ್ದಾರೆ. ಒಬ್ಬ ಇಲಾಖೆಯ ಮುಖ್ಯಾಧಿಕಾರಿಗಳು, ಎಕ್ಸಿಕ್ಯೂಟಿವ್ ಅಧಿಕಾರಿಗಳಿಗೇ ಈ ಒಂದು ನ್ಯಾಯ ನಿರ್ವಹಣ ಕಾರ್ಯ ಮಾಡುವುದಕ್ಕೆ ಸಾಧ್ಯವಿಲ್ಲ. ತೊಂದರೆ ಇದೆ. ಕಾರಣವೇನೆಂದರೆ ಅವರಿಗೆ ಕಾಲ ಸಿಕ್ಕುವುದಿಲ್ಲ. ಎಂದಮೇಲೆ ಇಬ್ಬರು ಇಲಾಖಾಧಿಕಾರಿಗಳು ಸೇರಿ ನ್ಯಾಯ ಕೊಡಬೇಕು, ಅದೂ ಕೊನೆಯ ತೀರ್ಮಾನ ಮಾಡಬೇಕು ಎಂದರೆ ಎಷ್ಟು ಕಷ್ಟ ಎಂಬುದು, ಇಲಾಖೆಯ ಮುಖ್ಯಾಧಿಕಾರಿಗಳನ್ನು ಅನೇಕ ಕಮಿಟಿಗಳಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತ ಇರತಕ್ಕ ಸಂದರ್ಭಗಳಲ್ಲಿ ಮುಖ್ಯಾಧಿಕಾರಿಗಳು ಬರದೇ ಅನೇಕ ಸಂದರ್ಭಗಳಲ್ಲಿ ಮೀಟಿಂಗ್ ಅಡ್ಜರ್ನ್ ಆಗಿ, ಬಂದಿರತಕ್ಕ ಸದಸ್ಯರು ನುಮ್ಮನೆ ವಾಪಸು ಹೋಗುತ್ತಾ ಇರತಕ್ಕದ್ದನ್ನು ಕಣ್ಣಾರೆ ನೋಡಿದವರಿಗೆ ಗೊತ್ತಾಗುತ್ತದೆ. ಆದ್ದರಿಂದ ಇದರಿಂದ ನ್ಯಾಯ ನಿರ್ವಹಣೆ ಜಾಗ್ರತೆ ಆಗುವುದಕ್ಕಿಂತ ಹೆಚ್ಚು ತಡವಾಗುತ್ತದೆ ಎಂಬುದು ನಿರ್ವಿವಾದವಾದದ್ದು. ಮಾನ್ಯ ಸಚಿವರು ಈ ಮನೂದೆಯನ್ನು ಮಂಡಿಸತಕ್ಕ ಸಂದರ್ಭದಲ್ಲಿ ವಿಶದೀಕರಿಸುತ್ತಾ ಸರ್ಕಾರದವರಿಗೆ ಈ ಕೆಲವು ಅಂಶಗಳ ಬಗ್ಗೆ ಬಂದಿರತಕ್ಕ ಅಪೀಲು ಪೆಟಿಷ್ಟಗಳು, ರಿವಿಷ್ಟ್ ಅಪ್ಲಿಕೇಷ್ಟಗಳು ಎಷ್ಟು ಎಂಬ ಅಂಕಿ ಅಂಶಗಳ ತಪ್ಪೆಯನ್ನು ಮಾನ್ಯ ಸಭೆಯ ಮುಂದೆ ಇಟ್ಟರು. ಅವರು ಕೊಟ್ಟಿರತಕ್ಕ ಅಂಕಿ ಅಂಶ ನೋಡಿದ್ದರಲ್ಲಿ ಸರ್ಕಾರದ ವರಿಗೇನೋ ಈ ಬಗ್ಗೆ ಕೆಲಸ ಜಾಸ್ತಿಯಾಗುತ್ತಾ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೂ ಅವರು ಇನ್ನೂ ಒಂದು ಅಂಶವನ್ನು ನಮ್ಮ ಮುಂದೆ ಇಟ್ಟಿದ್ದರೆ ಇದರ ಪೂರ್ಣ ವಿಮರ್ಶೆಗೆ ಅವಕಾಶವಾಗುತ್ತಾ ಇತ್ತು. ಈಗ ಹಾಲ ರೆವಿನ್ಯೂ ಕಮೀಷನರ ಮುಂದೆ ಬರತಕ್ಕ ರಿವಿಜ್ ಅಪ್ಲಿಕೇಷ್ಟಗಳೆಷ್ಟು; ಎಕ್ಸೈಜ್ ಕಮೀಷನರ್, ಎಲ್. ಎಸ್, ಜಿ. ಕಮೀಷನರ್ ಇವರುಗಳ ಮುಂದೆ ಬರತಕ್ಕ ಅಪ್ಲಿಕೇಷ್ಟಗಳು ಎಷ್ಟು; ಅವರು ಆ ಅಪೀಲುಗಳನ್ನು ವಿಲೇಮಾಡಿರತಕ್ಕದ್ದು ಎಷ್ಟು; ಈಗಿರತಕ್ಕ ಕಾಲಾವಧಿಯಲ್ಲಿ ಸಮರ್ಪಕವಾಗಿ ವಿಲೇಮಾಡಲಕ್ಕೆ ಶಕ್ತರಾಗಿದ್ದಾರೆಯೇ; ಅವರಿಗೆ ಈ ಮನೂದಾಕಾನೂನಿನ ಪ್ರಕಾರ ಇನ್ನೂ ಹೆಚ್ಚಿನ ಕೆಲಸ ಕೊಡುವುದಾದರೆ ಅದನ್ನು ಸಮರ್ಪಕವಾಗಿ ಮಾಡಲಕ್ಕೆ ಸಾಧ್ಯವಾಗುತ್ತದೆಯೇ—ಎಂಬ ಈ ಕೆಲವು ಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದರೆ ಬಹುಶಃ ಇದನ್ನು ಇನ್ನೂ ಸಮರ್ಪಕವಾಗಿ ತೀರ್ಮಾನ ಮಾಡಲಕ್ಕೆ, ಒಂದು ನಿರ್ಧಾರಕ್ಕೆ ಬರಲಕ್ಕೆ ಅವಕಾಶವಾಗುತ್ತಿತ್ತು ಎಂದು ನನಗೆ ಅನ್ನಿಸುತ್ತದೆ. ನಮಗೆ ಗೊತ್ತಿರತಕ್ಕ ಒಂದು ಸರ್ವೇ ಸಾಧಾರಣ ಅಭಿಪ್ರಾಯದಲ್ಲಿ ಹೇಳುವುದಾದರೆ, ಯಾವ ಒಬ್ಬ ಇಲಾಖಾ ಮುಖ್ಯಾಧಿಕಾರಿಗಳಿಗೂ ಕೂಡ ಈ ದಿವಸ ಕೆಲಸ ಕಡಮೆ ಇಲ್ಲ. ಹಾಗಿರುವಾಗ ಇನ್ನೂ ಹೆಚ್ಚಿನ ಕೆಲಸ ನಿರ್ವಹಣೆ ಮಾಡಲಕ್ಕೆ ಅವಕಾಶವಿದೆ ಎಂದು ಹೇಳುವುದರಲ್ಲಿ ನಮಗಂತೂ ನಂಬಿಕೆ ಇಲ್ಲ, ಸ್ವಾಮಿ.

ಇನ್ನು ಈ ಬಿಲ್ಲಿನಲ್ಲಿ ಅಡಕವಾಗಿರತಕ್ಕ ಒಂದೆರಡು ಪ್ರಾವಿಜ್ಞಿಗಳ ಬಗ್ಗೆ ಮಾತನಾಡುವುದಾದರೆ, ಸೆಕ್ಷನ್ (5) ರ ಪ್ರೊವೈಜೋವನ್ನು ಮಾನ್ಯ ಸದಸ್ಯರು ಶ್ರೀಮಾನ್ ಚನ್ನಬಸಪ್ಪನವರು ಓದಿ ಹೇಳಿದರು. ಅದರಲ್ಲಿ ಸೂಚಿಸಿರುವಂತೆ ತೀರ್ಮಾನ ಮಾಡತಕ್ಕ ಸಂದರ್ಭದಲ್ಲಿ ಭಿನ್ನಾಭಿಪ್ರಾಯ ಬಂದ. ಸಂದರ್ಭದಲ್ಲಿ ಹಿಂದೆ ತೀರ್ಮಾನ ಮಾಡಿದವರೇ ಈಗ ಎರಡನೇ ಸಂದರ್ಭದಲ್ಲಿ ತೀರ್ಮಾನ ಮಾಡುವುದಿಲ್ಲ. ಅಂಥ ಒಂದು ಪ್ರೊವೈಸೋ (2) ರಲ್ಲಿ ಇದೆ. ಅದು ಈ ರೀತಿ ಇದೆ:

> "5(2): Provided further that no appeal or revision petition against original order referred to in sub-section (2) of section 4 shall be heard by the member who passed the original order."

> "4(2): The appellate or revisional powers exercisable by or under any enactment, regulation, rule or order having the force of law by the State Government against any original order passed by the Revenue Commissioner, the Muzrái Commissioner, the Commissioner for Land Records, the Excise Commissioner, the Commissioner of Sales Tax, the Commissioner for Local Self-Government or the Commissioner of Stamps, shall be exercisable by the Board."

ಎಂದರೆ ಈಗಾಗಲೇ ಈ ಕೆಲವು ಅಧಿಕಾರಿಗಳ ಆದ್ದರುಗಳಮೇಲೆ ಸರ್ಕಾರದವರು ಏನು ಅಧಿಕಾರವನ್ನು ಚಲಾಯಿಸುತ್ತಿದ್ದರೋ ಆ ಅಧಿಕಾರವನ್ನೂ ಮುಂದೆ ಅಂಥ ಸಂದರ್ಭಗಳಲ್ಲಿ ಬೋರ್ಡಿನವರು ಚಲಾಯಿಸುತ್ತಾರೆ ಎಂದು ಹೇಳಿದ ಹಾಗಾಯಿತು.

4-30 P.M.

ಆದ್ದರಿಂದ ಮುಂದೆ ಬರಬಹುದಾದ ಕೇಸುಗಳ ವಿಚಾರದಲ್ಲಿ ಸರ್ಕಾರದವರೇನು ಅಧಿಕಾರ ಚಲಾ

ಯಿಸುತ್ತಿದ್ದಾರೋ ಆ ಅಧಿಕಾರವನ್ನು ಈ ಬೋರ್ಡು ಚರಾಯಿಸುತ್ತದೆ. ಆದರೆ ಬೋರ್ಡಿನಲ್ಲಿ ಯಾವಾಗಲೂ ಇಬ್ಬರು ಸದಸ್ಯರಾದರೂ ಇದ್ದು ಕೇಸನ್ನು ಪರಿಶೀಲಿಸಿ ಆರ್ಡರು ಮಾಡಬೇಕು. ಮೊದಲನೆಯ ಪ್ರಾವಿಸೋದಲ್ಲಿ ಹೇಳಿರುವುದನ್ನು ಬಿಟ್ಟು ಬಾಕಿ ಎಲ್ಲಾ ಸಂದರ್ಭಗಳಲ್ಲೂ ಕೂಡ ಇಬ್ಬರು ಸದಸ್ಯರಿಗೆ ಕಡಮೆಯಿಲ್ಲದೆ ಇದ್ದು ಕೇಸನ್ನು ತೀರ್ಮಾನ ಮಾಡಬೇಕು. ಈ ಒಂದು ತೊಂದರೆ ಕೂಡ ಈ ಬಿಲ್ಲಿನಲ್ಲಿದೆ.

ಇನ್ನು 6ನೆಯ ಕ್ಲಾಜಿನಲ್ಲಿ "Powers of revision of the State Government" ಹೇಳಿದ್ದಾರೆ. ಅದರಲ್ಲಿ ಒಂದು ಪ್ರಾವಿಸೋ ಸಹ ಹಾಕಿದ್ದಾರೆ. ಅದು ಈ ರೀತಿಯಾಗಿದೆ:

> "Provided that nothing in this section shall apply to—
>
> (i) any order of the Board under the Mysore Sales Tax Act, 1948 (Mysore Act XLVI of 1948) or the Motor Spirit (Taxation on Sales) Act, 1949".

ಈ ಪ್ರಾವಿಸೋ ಏಕೆ ಹಾಕಿದ್ದಾರೆಂಬುದು ಅರ್ಥವಾಗುವುದಿಲ್ಲ, ಬಾಕಿ ಎಲ್ಲಾ ಕಾನೂನುಗಳ ಪ್ರಕಾರ ಬರುವ ಕೇಸುಗಳಿಗೆ ಸರ್ಕಾರದವರು ರಿವಿಷ್ ಅಧಿಕಾರವನ್ನಿಟ್ಟುಕೊಂಡು, ಈಗ ಹೊಸದಾಗಿ ಆಗಿರುವ ಕಾನೂನು ಪ್ರಕಾರ ಸೇಲ್ಸ್‌ಟ್ಯಾಕ್ಸ್ ಕಮಿಷನರ ಮೇಲೆ ಅಪೀಲ್ ರಿವಿಷನ್ನಿಗೆ ಸರ್ಕಾರ ಅಧಿಕಾರ ಇಟ್ಟುಕೊಂಡು, ಈ ಕಾನೂನಿನ ಪ್ರಾವಿಸೋವಿನಲ್ಲಿ ನಮೂದಿಸಿರುವುದಕ್ಕೇಕೆ ಸರ್ಕಾರ ಅಧಿಕಾರವಿಟ್ಟುಕೊಂಡಿಲ್ಲ! ಒಂದುವೇಳೆ ಈ ಬೋರ್ಡನ್ನು ರಚಿಸಬೇಕು, ಇದರಿಂದ ಎಲ್ಲಾ ಅನುಕೂಲವಾಗುತ್ತದೆಂದು ಹೇಳಿದರೆ ಈ ಪ್ರಾವಿಸೋ ಉದ್ದೇಶವೇನು! ಇದು ಗೊತ್ತಾಗಲಿಲ್ಲ.

ಇನ್ನೊಂದು ಮೂರನೆಯ ಥಾಪ್ಷರಿನಲ್ಲಿ "Pending proceedings to be transferred to the Board" ಎಂದು ಹೇಳಿದೆ. ಇದು ಈಗಾಗಲೆ ಸರ್ಕಾರದ ಮುಂದಿರುವ ರಿವಿಷ್ ಮತ್ತು ಅಪೀಲುಗಳಿಗೆ ಅನ್ವಯಿಸುವ ಕ್ಲಾಜೆಂದು ನಾನು ತಿಳಿದಿದ್ದೇನೆ. ಈ ಕೇಸುಗಳನ್ನೆಲ್ಲಾ ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗಳಾದ ರೆವಿನ್ಯೂ ಕಮಿಷನರು, ಎಲ್.ಎಸ್.ಜಿ. ಕಮಿಷನರು ಮುಂತಾದವರು ಹಿಯರ್ ಮಾಡಿ ಆರ್ಡರು ಪಾಸ್ ಮಾಡಿರತಕ್ಕಂಥವು. ಅದರ ಮೇಲೆ ಸರ್ಕಾರಕ್ಕೆ ಅಪೀಲುಗಳು ಬಂದಿವೆ. ಇಂಥ ಕೇಸುಗಳನ್ನೆಲ್ಲಾ ಪುನಃ ಈ ಕೋರ್ಟಿಗೆ ವರ್ಗಾಯಿಸುತ್ತೀವೆ, ಯಾರು ಆರ್ಡರು ಪಾಸ್ ಮಾಡಿದ್ದರೋ ಅವರೇ ಪುನಃ ಕಷ್ಟಗಳನ್ನು ಹಿಯರ್ ಮಾಡಬೇಕು ಎಂದು ಹೇಳಿದರೆ . . .

Mr. SPEAKER.—Sri Masiyappa, there is a provision that he should not sit over his own judgment.

Sri V. MASIYAPPA.—That would be a still more anomalous position.

ಏಕೆಂದರೆ ಸೇಲ್ಸ್‌ಟ್ಯಾಕ್ಸ್ ಕಮಿಷನರಿಗೆ ಸೇಲ್ಸ್‌ಟ್ಯಾಕ್ಸ್ ಕೆಲಸ ಗೊತ್ತಾಗುತ್ತದೆ, ಅವರಿಗೆ ಅದರ ಅನುಭವ ಚೆನ್ನಾಗಿರುತ್ತದೆ. ಅವರು ಆ ಸಂಬಂಧಪಾದ ಕೇಸನ್ನು ಹಿಯರ್ ಮಾಡದೆ ರೆವೆನ್ಯೂ ಕಮಿಷನರು, ಎಲ್.ಎಸ್.ಜಿ. ಕಮಿಷನರು ಸೇಲ್ಸ್‌ಟ್ಯಾಕ್ಸ್ ಕಾನೂನು ಪ್ರಕಾರ ಕೇಸುಗಳನ್ನು ಡೀಲ್ ಮಾಡದಿರುವವರು ಈ ದಿವಸ ಡೀಲ್ ಮಾಡಿ ಜಡ್ಜ್‌ಮೆಂಟ್‌ಕೊಟ್ಟರೆ ಎಷ್ಟುಮಟ್ಟಿಗೆ ಅದು ಸಮರ್ಪಕವಾದೀತು ಎಂಬುದನ್ನು ಆಲೋಚನೆ ಮಾಡಬೇಕು. ಹೀಗಿರುವುದರಿಂದ ಈ ಮಸೂದೆಯು ಕೆಲವಾರು ಅಂಶಗಳಲ್ಲಿ ತಿದ್ದುಪಡಿಯಾಗಬೇಕಾದದ್ದು ಅವಶ್ಯಕ. ಇದೂ ಅಲ್ಲದೆ ದೇಶದಲ್ಲಿ ರೆವಿನ್ಯೂ, ಸೇಲ್ಸ್‌ಟ್ಯಾಕ್ಸ್, ಎಕ್ಸೈಜ್ ಕೇಸುಗಳೇ ಅನೇಕ. ಇವುಗಳಲ್ಲಿ ತೊಂದರೆಯಾಗುವುದಾದರೆ ಮೈನೂರು ಸಂಸ್ಥಾನದ ಹೆಚ್ಚು ಜನರಿಗೆ ಅಫೆಕ್ಟಾಗುವ ಸಂಭವವಿದೆ. ಈ ಬಿಲ್ಲು ಚಿಕ್ಕದಾದರೂ ಅಂಗೀಕಾರ ಮಾಡುವಾಗ ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಇದಕ್ಕೆ ಸಾರ್ವಜನಿಕ ಅಭಿಪ್ರಾಯವನ್ನು ಮುಂಚೆ ಸಂಗ್ರಹ ಮಾಡುವುದು ಒಳ್ಳೆಯದು. This is a Bill which touches the larger section of the public. ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ ಇದನ್ನು ಅಂಗೀಕಾರ ಮಾಡಬೇಕೆ, ಬಿಡಬೇಕೆ ಎಂಬುದನ್ನು ವಿಮರ್ಶೆ ಮಾಡುವುದು ಅವಶ್ಯಕ. ಆದ್ದರಿಂದ ಪಬ್ಲಿಕ್ ಒಪೀನಿಯನ್ ಎಲಿಸಿಟ್ ಮಾಡಲು ಈ ಮಸೂದೆಯನ್ನು ಸರ್ಕ್ಯುಲೇಷನ್‌ಗೆ ಕಳುಹಿಸಬಹುದು ಎಂದು ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಮಸೂದೆಯು ಈಗಿರತಕ್ಕ ರೀತಿಯಲ್ಲಿ ಸ್ವಾಗತಾರ್ಹವಾಗಿಲ್ಲ ಎಂಬುದು ನನ್ನಭಿಪ್ರಾಯ. ರೆವೆನ್ಯೂ ಮಂತ್ರಿಗಳು ಈ ಬಿಲ್ಲನ್ನು ಮಂಡಿಸಿದಾಗ ಇದರ ಉದ್ದೇಶ ಅವರಲ್ಲಿ ಅಪೀಲುಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಬೇರೊಂದು ಕೋರ್ಟನ್ನು ಅಥವಾ ಬೋರ್ಡನ್ನು ಏರ್ಪಡಿಸಿ ಜಾಗ್ರತೆ ಅವು ಫೈನಲಾಗಲು ಅವಕಾಶ ಮಾಡಬೇಕೆಂಬುದು ಎಂದು ಹೇಳಿದ್ದಾರೆ. ಆದರೆ ಈಗಿರತಕ್ಕ ಅಪೀಲು ಕೋರ್ಟುಗಳ ಸಂಖ್ಯೆಗೆ ಇನ್ನೊಂದು ಜಾಸ್ತಿಯಾಗಿ ಸೇರಿ ಇದರಿಂದ ಕಾಲವಿಳಂಬವಾಗಲು ಅವಕಾಶವಾಗುತ್ತದೆ, ನ್ಯಾಯ ದೊರೆಯಲು ನಿಧಾನವಾಗುತ್ತದೆ ಎಂದು ನನಗೆ ಭಯವಾಗಿದೆ. ಮುಖ್ಯವಾಗಿ ನಮಗೊಂದು ರೆವೆನ್ಯೂ ಬೋರ್ಡ್ ಆಗಬೇಕೆಂದು ನಾವು ಕೇಳಿದ ಉದ್ದೇಶವೇ ಬೇರೆ. ಹಿಂದೆ 1946ಕ್ಕೆ ಮುಂಚೆ ರೆವೆನ್ಯೂ ಅಪೀಲುಗಳೆಲ್ಲಾ ಇಬ್ಬರು ಮಂತ್ರಿಗಳಿಂದ ಪರಿಶೀಲಿಸಲ್ಪಡುತ್ತಿದ್ದುವು. ಆಗ ಅವರು ಕಾನೂನು ಪ್ರಕಾರ ಪ್ರೊಸೀಜರಲ್ ಮ್ಯಾಟರ್ಸ್‌ನಲ್ಲಿ ಏನಾದರೂ ಕುಂದು ಕೊರತೆಯಿದ್ದರೆ ಮಾತ್ರ ಪರಿಶೀಲಿಸಿ ತೀರ್ಮಾನ ಕೊಡುತ್ತಿದ್ದರು. ಈಗ ಹಾಗಿಲ್ಲ. ಯಾವುದಕ್ಕೂ ಒಂದು ಇಫ್ಲ್ಯುಯನ್ಸ್ ಅಥವಾ ಪ್ರಭಾವ ಹೆಚ್ಚುಕೆಲಸ ಮಾಡುತ್ತಿದೆ. ಒಂಬೊಂದು ಅಪೀಲು ಫೈನಲಾಗಬೇಕಾದರೆ ಹತ್ತಾರು ವರ್ಷಗಳಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಉದಾಹರಣೆ ಕೊಡಿ.

ಶ್ರೀ ಬಿ. ಹುಚ್ಚೇಗೌಡ.—ನೂರು ಬೇಕಾದರೂ ಕೊಡುತ್ತೇನೆ. ಸೆಕ್ಷನ್ ಆರರ ಪ್ರಕಾರ ರಿವ್ಯೂ ಮಾಡುತ್ತಾರೆ. ರಿವ್ಯೂ ಅಂದರೇನು? ಈಗ ರೆವೆನ್ಯೂ ಮಂತ್ರಿಗಳು ಎಂಟನೆಯ ರಿವ್ಯೂ, ಒಂಬತ್ತನೆಯ ರಿವ್ಯೂ ಮಾಡುತ್ತಿದ್ದಾರೆ.

Sri Kadidal MANJAPPA.—Sir, the Member is giving a wrong picture; we are not reviewing in that way.

Mr. SPEAKER.—Will the Hon'ble Member disclose some of such instances, because it is a very serious charge?

Sri Kadidal MANJAPPA.—I request the Hon'ble Member to let me know the number of cases where Government

(SRI KADIDAL MANJAPPA.)

has given a decision and again revised it.

Sri B. HUTCHE GOWDA.—I accept the challenge. Has the Minister not come across such cases, I ask.

Mr. SPEAKER.—But the Revenue Minister desires to know if there are any such cases; you can point out.

Sri B. HUTCHE GOWDA.—I will quote tomorrow, Sir. ಈಗ ಅವರ ಹತ್ತಿರ ಇಂಥ ಕೇಸುಗಳು ಬಂದಿಲ್ಲವೆಂದು ಹೇಳಿದರೆ ಮುಂದೆ ಕೋಟ್ ಮಾಡುತ್ತೇನೆ

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಹತ್ತಿರ ಬಂದಿಲ್ಲ. ತಾವು ಎಂಟನೆಯ ರಿವ್ಯೂ, ಒಂಬತ್ತನೆಯ ರಿವ್ಯೂ ಮಾಡಿದ್ದಾರೆಂದು ಹೇಳಿದಿರಲ್ಲಾ, ಆ ಸಂದರ್ಭಗಳು ಯಾವುವೆಂಬುದನ್ನು ತಿಳಿಸಿ.

ಶ್ರೀ ಬಿ. ಹುಚ್ಚೇಗೌಡ.—ನನ್ನ ಸ್ವಂತ ಕೇಸನ್ನೇ ತೆಗೆದುಕೊಂಡರೆ ಐದನೆಯ ರಿವ್ಯೂ ಆಗಿದೆ. ಇದನ್ನು ಡಿನೈ ಮಾಡುವುದಕ್ಕೆ ಶಕ್ತಿಯಿದೆಯೆ, ಹೇಳಲಿ.

Mr. SPEAKER.—This is the only case you have said. (*Laughter.*)

ಶ್ರೀ ಬಿ. ಹುಚ್ಚೇಗೌಡ.—ಬೇಕಾದರೆ ಬರೆದು ನಾಳೆಯ ದಿವಸ ತಂದುಕೊಡುತ್ತೇನೆ.

ಈ ರೀತಿ ಆಗಿದೆ ಎಂದು ಹೇಳುವಾಗ ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ಇಂಥ ಒಂದು ಕೇಸನ್ನು ಹೈಕೋರ್ಟಿನಲ್ಲಿ writ ಹಾಕಿರುತ್ತಾರೆ. ಅದು ವಿಚಾರಣೆಗೆ ಇದೆ. ಎಂಟನೆಯ revision petition ಬೇಕಾದರೆ ಅದನ್ನು ತರಿಸಿಕೊಂಡು ನೋಡಬಹುದು. ಈ caseನಲ್ಲಿ ಕಾನೂನಿಗೆ ವ್ಯತಿರಿಕ್ತವಾಗಿಯೇ ವರ್ತಿಸಿರುತ್ತಾರೆಯೋ ಅಥವಾ procedureನಲ್ಲಿ ತಪ್ಪುಮಾಡಿರುತ್ತಾರೆಯೋ ನನಗೆ ತಿಳಿಯದು. ಹತ್ತು-ಇಪ್ಪತ್ತು ವರ್ಷಗಳ ಹಿಂದೆ ಫೈನಲ್ ಆದ ಕೇಸುಗಳನ್ನು ಪುನಃ review ಮಾಡಿರುವ ಸಂದರ್ಭಗಳಿವೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ರೀತಿ ಅವರು ಹೇಳುವುದನ್ನು ನೋಡಿದರೆ ಅವರಿಗೆ ಸರಿಯಾದ ಮಾಹಿತಿ ಇಲ್ಲವೆಂದೇ ಹೇಳಬೇಕಾಗುತ್ತದೆ.

Sri B. HUTCHE GOWDA.—I am referring to . . .

Mr. SPEAKER.—Please wait. On the point said by the Member that revision was admitted on a case sufficiently old and decision given after reviews eight or nine times, I think the Minister is entitled to make a statement.

Sri B. HUTCHE GOWDA.—Yes, let him make a statement. (*Interruption.*)

Sri L. SIDDAPPA (Chennagiri).—He is entitled to make, Sir.

Sri Kadidal MANJAPPA.—Sir, the state of affairs that he has pictured is not prevailing now. I am not aware of any case in which the revision petition is entertained and decision given for the 8th time.

Sri J. MOHAMED IMAM (Jagalur).—Not by you.

Mr. SPEAKER.—He is entitled to reply so far as he is concerned.

ಶ್ರೀ ಬಿ. ಹುಚ್ಚೇಗೌಡ.—ಇನ್ನು ಈ ಬಿಲ್ಲಿನ ವಿಚಾರದಲ್ಲಿ ಮಾತನಾಡುತ್ತೇನೆ. 1940ನೆಯ ಇನವಿಯಂದಲೂ ಈಗ ಒಂದೇ ವಿಧವಾದ ಪದ್ಧತಿ ನಡೆದುಕೊಂಡು ಬಂದಿದೆ. ಇದರಲ್ಲಿ ಸ್ವೇಚ್ಛಾವರ್ತನೆ ಇದೆಯೆಂಬ ಅಭಿಪ್ರಾಯದಿಂದಲೋ ಏನೋ, ಈ ಪದ್ಧತಿಯನ್ನು ತಪ್ಪಿಸಿ ಒಂದು impartial tribunal,—ಬೋರ್ಡ್ ಆಫ್ ರೆವೆನ್ಯೂ ಬೇಕೆಂದು ಕೇಳಿರುವ ಹಾಗಿದೆ. ಈ impartial tribunalಗೆ ಪೂರ್ಣಾಧಿಕಾರ ಕೊಟ್ಟು ಅದೇ appellate authority ಯಾಗಿ ಪರಿಣಮಿಸಿದರೆ ಪರವಾಗಿಲ್ಲ. ಹಾಗಿಲ್ಲದೆ ಹೋದರೆ ಬಡವರಿಗೆ ನೂರಾರು ರೂಪಾಯಿಗಳ ಖರ್ಚು, ವೆಚ್ಚವಾಗುವ ಸಂಭವವಿದೆ.

ಈಗ ಸೆಕ್ಷನ್ ಆರರ ಪ್ರಕಾರ ಸರ್ಕಾರದವರು ಯಾವ ಸ್ಟೇಜ್‌ನಲ್ಲಿ ಬೇಕಾದರೂ interfere ಮಾಡಬಹುದೆಂದಿದೆ.

Mr. SPEAKER.—According to the Bill, the Government are entitled to call for records on revision. The powers of revision are now kept on.

Sri B. HUTCHE GOWDA.—It is said "The State Government may at any time....." What does 'at any time' mean? It is very comprehensive. Even after 100 years they may call for records on cases which have been disposed of previously.

Mr. SPEAKER.—Your interpretation is not correct. 'At any time' means, even if there is no appeal, they are entitled as a matter of right, if there is miscarriage of justice, to call for records. That is the interpretation.—Not on the previous cases which have been disposed of.

ಶ್ರೀ ಬಿ. ಹುಚ್ಚೇಗೌಡ.—ಇದಕ್ಕೆ period fix ಮಾಡುವುದು ಒಳ್ಳೆಯದು. At any time ಎಂದು ಹೇಳಿದರೆ ಒಂದುವೇಳೆ ಬೋರ್ಡ್ ಆಫ್ ರೆವೆನ್ಯೂ ತೀರ್ಮಾನವಾದ ಹತ್ತಾರು ವರ್ಷಗಳಾದ ಮೇಲೂ ಆ ಕೇಸನ್ನೂ ಪುನಃ ಸರ್ಕಾರದವರು ತರಿಸಿಕೊಂಡು ತೀರ್ಮಾನ ಮಾಡಬಹುದೇ ಎಂದು ನಾನು ಕೇಳುತ್ತೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ನೀವೇ suggest ಮಾಡಿ.

ಶ್ರೀ ಬಿ. ಹುಚ್ಚೇಗೌಡ.—ಈಗಿರತಕ್ಕ ಸೆಕ್ಷನ್ interpretation ವಿವರಣೆ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಹುಲಯೂರು ದುರ್ಗ).—ತಮ್ಮ interpretation ಯಾವರೀತಿ?

ಶ್ರೀ ಬಿ. ಹುಚ್ಚೇಗೌಡ.—"ಯಾವಕಾಲದಲ್ಲಾದರೂ" ಎಂದು ಹೇಳಿರುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

ಆಮೇಲೆ ಈ ಬೋರ್ಡ್ ಆಫ್ ರೆವಿನ್ಯೂನಲ್ಲಿ ರೆವೆನ್ಯೂ ಕಮಿಷನರ್, ಎಕ್ಸೈಜ್ ಕಮಿಷನರ್, ಕಮಿಷನರ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್ ಅಲ್ಲದೆ ಮತ್ತಾರಾದರೂ ಇರುವುದಾದರೆ—ಇಬ್ಬರು ಇರುವುದಕ್ಕೆ ಬದಲು ಮೂರುಮಂದಿ ಇದ್ದರೆ ಆಗ ಬಹುಮತ ಹೇಗೆ ಬರುತ್ತದೋ ಆರೀತಿ ತೀರ್ಮಾನಕ್ಕೆ ಬರಬಹುದು. ಹಾಗಿಲ್ಲದೆ ನಾಲ್ಕು ಮಂದಿ ಇದ್ದರೆ ಇಬರು ಒಂದುರೀತಿ ಅಭಿಪ್ರಾಯಕ್ಕೂ ಮತ್ತಿಬ್ಬರು ಬೇರೊಂದು ರೀತಿ ಅಭಿಪ್ರಾಯಕ್ಕೂ ಬಂದರೆ ಯಾವ ರೀತಿ ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲೇ ಇದೆ. ಅದನ್ನು ಪೂರ್ತಿಯಾಗಿ ಓದಿದರೆ ಗೊತ್ತಾಗುತ್ತದೆ—page 50.

ಶ್ರೀ ಬಿ. ಹುಚ್ಚೇಗೌಡ.—ಅದರಲ್ಲಿ—

> "Provided that where the Bench hearing the appeal, petition or application, is composed of two members and the members composing the Bench differ in opinion on any point material for the decision of the case, they shall state such point, and the case shall then be heard upon that point only by another member of the Board, and such point shall be decided according to the opinion of the majority of the members including those who first heard it."

ಇಬ್ಬರು ಎಂದು ಮಾತ್ರ ಇದೆ. ನಿರ್ದಿಷ್ಟವಾಗಿ ನಾಲ್ಕು ಜನರು ಇದ್ದರೆ ಏನುಮಾಡುವುದು ?

Sri Kadidal MANJAPPA.—Rules will be provided for those things.

ಶ್ರೀ ಬಿ. ಹುಚ್ಚೇಗೌಡ.—ಈಗ ನೇರವಾಗಿ, ಶ್ರೀ ರಾಮರಾಯರು ಹೇಳಿದಂತೆ, ಡೆಪ್ಯುಟಿ ಕಮಿಷನರಿಂದ ತೀರ್ಮಾನವಾದಮೇಲೆ ಫೈನಲ್ ಅಪೀಲ್ ಬೋರ್ಡ್ ಆಫ್ ರೆವೆನ್ಯೂ ಮುಂದೆ ಬಂದರೆ ಸರಿಯಾಗಿದೆ. ಹಾಗಿಲ್ಲದಿದ್ದರೆ ತಮ್ಮ ಷ್ಟವಸ್ಟೆ ಈ ವಿಚಾರದಲ್ಲಿ ಅತ್ಯಪ್ತಿಕರವಾದುದೆಂದೇ ಹೇಳಬೇಕಾಗಿದೆ. ಈಗಿನ ಆಡಳಿತದಲ್ಲಿ ದಕ್ಷತೆ ಇಲ್ಲವೆಂಬುದನ್ನು ಮಂತ್ರಿಗಳೇ ಒಪ್ಪಿಕೊಂಡಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಎಂದಿಗೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅವರ ಆಡಳಿತದಲ್ಲಿಯ ದೋಷಗಳು ಒಂದೊಂದಾಗಿ ಈಚೆಗೆ ಬರುತ್ತಿವೆ. ಇತ್ತೀಚೆಗೆ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್‌ನ ಅವ್ಯವಸ್ಥೆಯ ವಿಚಾರ ಅವರೇ ಒಪ್ಪಿಕೊಂಡಿದ್ದಾರೆ. ಅದರಲ್ಲಿ ಸರಿಯಾದ discipline ಇಲ್ಲವೆಂದು ಹೇಳಿದ್ದಾರೆ.

Mr. SPEAKER.—May I request the Member to speak only on the provisions of the Bill ?

Sri J. MOHAMED IMAM.—These are all auxiliary ones. (*Laughter*)

Mr. SPEAKER.—The Hon'ble Member may confine himself to the provisions of the Bill.

ಶ್ರೀ ಬಿ. ಹುಚ್ಚೇಗೌಡ.—ಇಷ್ಟು ನಿರ್ಬಂಧಮಾಡುವುದಾದರೆ ಒಂದು ಬಿಲ್ಲಿನಮೇಲೆ ಯಾವ ಯಾವ ವಿಚಾರ ಮಾತನಾಡಬೇಕೋ ಅದನ್ನು ಹೇಳದೇ ಒತ್ತಾಯ ಮಾಡುವುದಕ್ಕೆ ಸಾಧ್ಯವೇ ಆಗುವುದಿಲ್ಲ.

Mr. SPEAKER.—I have no objection to your making a reference to the provisions in the Bill, but not to what the Chief Minister said outside the House regarding certain other matters.

ಶ್ರೀ ಬಿ. ಹುಚ್ಚೇಗೌಡ.—ಈ ರೀತಿ ಆಗುತ್ತಾ ಇರುವುದು ವಾಸ್ತವವಾಗಿದೆ ಎಂಬುದನ್ನು ಸ್ಪಷ್ಟೀಕರಿಸುವುದಕ್ಕಾಗಿ ಅದನ್ನು ಹೇಳಿದೆ. ನಾನು ಹೇಳುವುದು miscarriage of justice ಗೆ ಸಂಬಂಧಪಟ್ಟಂತೆ. ಒಬವರಿಗೆ ಜಮೀನು ಕೊಡಬೇಕೆಂದರೆ ರೆವಿನ್ಯೂ ಕಮಿಷನರು, 1000 ರೂಪಾಯಿಗಳಿಗೆ ಕೊಡಬೇಕು, ಅದಕ್ಕಿಂತ ಕಡಿಮೆ ಕೊಡಲೇಕೂಡದು, ಬೇಕಾದರೆ ಹರಾಜಿನಲ್ಲಿ ತೆಗೆದುಕೊಳ್ಳಲಿ ಎಂದು ಆರ್ಡರ್ ಮಾಡುತ್ತಾರೆ. ಹೀಗಾಗಿ ಒಬವರಿಗೆ ಜಮೀನು ಸಿಕ್ಕುವುದಿಲ್ಲ. ಈ ರೀತಿ ಸರ್ಕಾರದ ಅಭಿಪ್ರಾಯವನ್ನು ಜಾರಿಮಾಡಬೇಕಾದರೆ ಅನೇಕ ತಪ್ಪುಗಳು ನಡೆಯುತ್ತವೆ. ಒಂದೊಂದು ಅಪೀಲು ತೀರ್ಮಾನವಾಗಬೇಕಾದರೆ ವರ್ಷ, ಎರಡು ವರ್ಷಗಳಾಗುತ್ತವೆ. ಈಗಲೇ ಹೀಗಿರುವಾಗ ಇನ್ನು ಮುಂದೆ ಇದರ ಪ್ರಕಾರ 10-12 ವರ್ಷಗಳಾಗುತ್ತವೆಯೋ ಏನೋ ಎಂಬ ಅನುಮಾನ ನನಗಿದೆ. ಆದ್ದರಿಂದ ಸಾಮಾನ್ಯವಾಗಿ ಅಪೀಲು ಕೋರ್ಟುಗಳನ್ನು ಕಡಮೆಮಾಡಬೇಕು. ಬೋರ್ಡ್ ಆಫ್ ರೆವಿನ್ಯೂ ಆಗಬೇಕಾಗಿದ್ದರೆ ಮಧ್ಯೆ ರೆವಿನ್ಯೂ ಕಮಿಷನರ ಒಂದು ಆಫೀಸು ಅನಾವಶ್ಯಕ. ಅದು ಒಂದು ಪೋಸ್ಟ್ ಆಫೀಸು ಆಗುತ್ತದೆ. ಫಸ್ಟ್ ಮೆಂಬರು, ಸೆಕೆಂಡ್ ಮೆಂಬರು, ಥರ್ಡ್ ಮೆಂಬರು ಎಂಬುದಾಗಿ ಇಟ್ಟುಕೊಳ್ಳಬಹುದು. ಬೊಂಬಾಯಿನಲ್ಲಿರುವಂತೆ ಅಡಿಷನಲ್ ಆಫೀಸರುಗಳನ್ನಿಟ್ಟರೆ ಸಾಕು ಹಾಗಿಲ್ಲದೆ ಇದ್ದರೆ ಖಂಡಿತವಾಗಿಯೂ ಬಡಜನರಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ಈಗಿರತಕ್ಕ ರೀತಿಯಲ್ಲಿ ಈ ಬಿಲ್ಲನ್ನು ಅನುಮೋದಿಸುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಶ್ರೀಮಾಚನ್ನಬಸಪ್ಪನವರು ತಿಳಿಸಿದಂತೆ ಇದನ್ನು ಸರ್ಕ್ಯುಲೇಷನ್ನಿಗೆ ಕಳುಹಿಸಬೇಕು ಅಥವಾ ಮುಂದಿನ ಅಧಿವೇಶನಕ್ಕೆ ಡೆಫರ್‌ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಸಭಾಪತಿಗಳೇ, ನಮ್ಮ ಸರ್ಕಾರದವರು 1954 ನೇ ಇಸವಿಯ ಮೈಸೂರು ಸಂಸ್ಥಾನದ ರೆವಿನ್ಯೂ ಬೋರ್ಡ್ ಮಸೂದಾಕಾನೂನನ್ನು ತಂದಿರತಕ್ಕಂಥ ಈ ಸಮಯದಲ್ಲಿ ಆ ಮಸೂದೆಯ ಕೆಲವು ಅಂಶಗಳನ್ನು ಕುರಿತು ಮತ್ತು ಆ ಮಸೂದೆಯನ್ನು ಯಾವ ಉದ್ದೇಶಕ್ಕೆ ತಂದಿದ್ದೇವೆ ಎಂದು ಸರ್ಕಾರದವರು ಕೊಟ್ಟಿದ್ದಾರೋ ಆ ಉದ್ದೇಶ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಇಂಥ ಬೋರ್ಡುಗಳು ನಮ್ಮ ಭಾರತದಲ್ಲಲ್ಲ ಪಿಕ್ಕ ಸಂಸ್ಥಾನ ಸರ್ಕಾರಗಳಲ್ಲೂ ಇವೆ. ನಮ್ಮ ಮೈಸೂರು ಸಂಸ್ಥಾನದಲ್ಲೆ ಇಲ್ಲ. ಅಲ್ಲದೆ ಸರ್ಕಾರಕ್ಕೆ ನೇರವಾಗಿ ಬರತಕ್ಕಂಥ ಅಪೀಲುಗಳನ್ನು ತಪ್ಪಿಸಿ ಅಪೀಲುಗಳ ಮೂಲಕ ಬರತಕ್ಕ ಜನಗಳಿಗೆ ಶೀಘ್ರ ನ್ಯಾಯ ದೊರಕುವಂತೆ ಏರ್ಪಡಿಸಬೇಕು ಎಂಬ ಉದ್ದೇಶದಿಂದಲೂ

(ಶ್ರೀ ಎ. ವಿ. ನರಸಿಂಹರೆಡ್ಡಿ.)

ಇದನ್ನು ತಂದಿದ್ದಾರೆ. ಯಾವ ಉದ್ದೇಶದಿಂದ ಈ ಬೋರ್ಡನ್ನು ರಚಿಸಿ ಕಾರ್ಯಸಾಧನೆ ಮಾಡಲಾಗುತ್ತದೆ ಎಂದು ಸರ್ಕಾರದವರು ಭಾವಿಸಿಕೊಂಡಿದ್ದಾರೋ ಆ ಉದ್ದೇಶ ಸಫಲವಾಗುತ್ತದೆಯೇ ಎಂಬ ವಿಷಯದಲ್ಲಿ ಸ್ವಲ್ಪ ಅನುಮಾನ ಕಾಣುತ್ತಿದೆ. ಈ ಬೋರ್ಡನ್ನು ರಚನೆಮಾಡುವ ವಿಷಯದಲ್ಲಿ ಎರಡು ಮುಖ್ಯ ವಿಷಯಗಳಿವೆ. ಮಂತ್ರಿಮಂಡಲ ನಿತ್ಯ ಆಡಳಿತ ಕೆಲಸಗಳಲ್ಲಿ ಪ್ರವೇಶಿಸತಕ್ಕ ಏನೊಂದು ಸಂದರ್ಭ ವಿದೆಯೋ ಅದು ಹೋಗಬೇಕು. ಎರಡನೆಯದು ನ್ಯಾಯ ಬೇಗ ದೊರಕಬೇಕು. ಇವೆರಡೂ ಮುಖ್ಯ ಅಂಶಗಳು. ಇವು ಎರಡೂ ನೆರವೇರಬೇಕಾಗಿದ್ದರೆ ಈ ಅಪೀಲುಗಳು ಬರತಕ್ಕ ಕ್ರಮವನ್ನು ನಿರ್ಬಂಧಿಸದೇ ಹೋದರೆ ಆಗುವುದಿಲ್ಲ. ನಮ್ಮ ಮಾನ್ಯಸದಸ್ಯರನೇಕರು ಈ ಸಂದರ್ಭದಲ್ಲಿ ಮಾತನಾಡಿರತಕ್ಕವರು ಆ ಅಂಶಗಳನ್ನು ತಿಳಿಸಿದ್ದಾರೆ. ಯಾವ ಒಬ್ಬ ರೆವಿನ್ಯೂ ಕಮಿಷನರು ಹೆಪ್ಯುಟಿ ಕಮಿಷನರಿಂದ ಬರತಕ್ಕ ರೆವಿನ್ಯೂಗೆ ಸಂಬಂಧಪಟ್ಟ ಕೇಸಿನಲ್ಲಿ ಯಾವ ತೀರ್ಪು ಕೊಟ್ಟಿರುತ್ತಾರೋ ಅದೇ ತೀರ್ಪಿನ ವಿಷಯ ಮತ್ತೆ ಬಂದಾಗ ಅವರೇ ತೀರ್ಮಾನ ಕೊಡಬೇಕಾದ ಸಂದರ್ಭ ಬರುತ್ತದೆ. ಅದನ್ನು ಶ್ರೀಮಾನ್ ಚನ್ನಬಸಪ್ಪನವರು ಬಹಳ ಚೆನ್ನಾಗಿ ಹೇಳಿದರು. ಅವರು ಹೇಳಿದಂತೆ ನಿಜವಾಗಿಯೂ ಅದು ಮನುಷ್ಯನ ಸ್ವಾಭಾವಿಕ ಗುಣಗಳಿಗೆ ನರಿಹೋಗುವುದಿಲ್ಲ. ಸ್ವಾಭಾವಿಕವಾಗಿ ಅವರ ಸ್ನೇಹಿತರು ಅಥವಾ ಅವರ ನ ಹ ಪಾ ಟಿ ಗ ಳು ಏನು ತೀರ್ಪನ್ನು ಕೊಟ್ಟಿರುತ್ತಾರೋ ಆ ಕಡೆಗೆ ಅವರ ಮನಸ್ಸು ವಾಲತಕ್ಕದ್ದು ಸ್ವಾಭಾವಿಕ. ಆದ್ದರಿಂದ ಅಂಥ ಜನಗಳಿರುವುದರಿಂದ ನಿಜವಾಗಿಯೂ ಈ ರೆವಿನ್ಯೂ ಬೋರ್ಡಿನ ಉದ್ದೇಶ ಸಫಲವಾಗುವುದಿಲ್ಲ ಎಂದು ಹೇಳಿದ್ದಾರೆ. ಅದು ನಿಜವಾದ ಭಾವನೆ, ಸ್ವಾಭಾವಿ.

ಇನ್ನು ಈ ಬಿಲ್ಲಿನ ಇತರ ಅಂಶಗಳಬಗ್ಗೆ ನಾನು ಹೆಚ್ಚು ಹೇಳಬೇಕಾದ್ದಿಲ್ಲ; ಅನೇಕ ಮಾನ್ಯ ಸದಸ್ಯರು ಆಗಲೇ ಹೇಳಿದ್ದಾರೆ. ಆದರೆ ಒಂದು ವಿಷಯವನ್ನು ಮಾತ್ರ ಉದ್ದೇಶ ಸಫಲವಾಗುವುದಕ್ಕೆ ಸಭೆಯ ಮುಂದೆ ಹೇಳುತ್ತೇನೆ. ಈ ರೆವಿನ್ಯೂ ಬೋರ್ಡಿನ ಸದಸ್ಯರು ಖಾಸಗೀ ಜನರಾಗಿರಬೇಕು. ಅವರು ಪೂರ್ಣ ಕಾಲಾವಧಿ ಅಧಿಕಾರಿಗಳಾಗಿರಬೇಕು. ಅವರಿಗೆ ನಾವು ಹಣವನ್ನು ಖರ್ಚುಮಾಡಬೇಕಾಗುತ್ತದೆ. ಅವರು ಮಾಡಬೇಕಾದ ಕೆಲಸದ ದೃಷ್ಟಿಯಿಂದ ಆ ರೀತಿ ಮಾಡುವುದು ಒಳ್ಳೆಯದು ಎಂದು ಸರ್ಕಾರದವರು ಭಾವಿಸುವುದಾದರೆ ಅವರಿಗೆ ಇದರ ಜೊತೆಗೆ ಇತರ ಇರಾಖೆಗಳವರ ಅನೇಕ ಕೆಲಸಗಳನ್ನು ವಹಿಸಬಹುದು, ಮತ್ತು ಸರ್ಕಾರಕ್ಕೆ ಈ ಬೋರ್ಡಿನಿಂದ ಅತ್ಯುತ್ತಮವಾದ, ಉಪಯುಕ್ತವಾದ ಕೆಲಸವಾಗುತ್ತದೆ. ಇತರ ಬಾಬುಗಳಲ್ಲಿ ಖರ್ಚು ಕಡಮೆಮಾಡಿ ಅದನ್ನು ಈ ಬೋರ್ಡಿನ ಖರ್ಚಿಗೆ ಒದಗಿಸಬಹುದು. ಉದಾಹರಣೆಗೆ ನಮ್ಮ ಸಂಸ್ಥಾನದಲ್ಲಿ ಸ್ಟೋರ್ಸ್ ಪರ್ಚೇಸ್ ಕಮಿಟಿ ಎಂಬುದಾಗಿ ಇದೆ. ಅದಕ್ಕೆ ಬೇರೆ ಒಬ್ಬ ಅಧಿಕಾರಿಗಳನ್ನು ಹಾಕಿ ಹಣ ಖರ್ಚು ಮಾಡುತ್ತಾ ಇದೆ ೀವೆ. ಆ ಬಾಬನ್ನು ಇದಕ್ಕೆ ವಹಿಸಬಹುದು. ಅದರಂತೆಯೇ ರೇಬರ್ ಇರಾಖೆ ಇದೆ; ಅವರ ಕೆಲಸವನ್ನು ಇವರಿಗೆ ವಹಿಸಬಹುದು. ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ ಪೂರ್ಣ ಕಾಲಾವಧಿ ಬೋರ್ಡನ್ನು ರಚನೆಮಾಡಿ ಈ ಎಲ್ಲಾ ಕೆಲಸಗಳನ್ನೂ ಅದಕ್ಕೆ ವಹಿಸಬೇಕು. ಆ ರೀತಿ ಬೋರ್ಡನ್ನು ರಚಿಸುವುದಕ್ಕೆ ಸರ್ಕಾರದವರು ಗಮನಕೊಡಬೇಕು. ಮತ್ತು ಈ ಬೋರ್ಡನ್ನು ಈಗಿರುವ ರೀತಿಯಲ್ಲಿ ನಾವು ರೂಪುಗೊಳಿಸುವುದರಿಂದ ಉದ್ದೇಶ ಸಫಲವಾಗುವುದಿಲ್ಲ. ಆದ್ದರಿಂದ ಯಾವ ತಿದ್ದುಪಡಿ ಬೇಕೋ ಅದನ್ನು ತಂದು ಉಪಯುಕ್ತವಾದ ರೀತಿಯಲ್ಲಿ, ಉದ್ದೇಶ ಸಫಲವಾಗುವ ರೀತಿಯಲ್ಲಿ, ಮಾರ್ಪಡಿಸಿ ಈ ಮಸೂದೆಯನ್ನು ನಮ್ಮಮುಂದೆ ತರಬೇಕೆಂದು ಸಲಹೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Now the House will rise and meet tomorrow at 12.

The House adjourned at Five of the Clock to meet again the next day Thursday, the 14th October 1954 at Twelve of the Clock.

WD 3539—GPB—550—6-11-54